ನೋಡಿಯೂ ನೋಡದವರಂತೆ ಸುಮ್ಮಗಾದರು. ಆದರೂ ಮಾತಾಡಿಸುವ ಉಮೇದಿನಿಂದ 'ಹಳಿಯಾಳ ಕಡೆ ಜೋರ ಮಾಡಮುಸುಕ ಹಾಕ್ಕೈತಿ, ಗುಡುಗು ಸಿಡ್ಲೂ ಏಕಲಾಕ್ ಹೊಡಿಯೂದ ನೋಡಿದರ ಮಳಿ ಬಿತ್ತು. ಅಳಿಯಾರ ಎಲ್ಲಿ ಮಳ್ಯಾಗ ಸಿಕ್ಕೊಂಡರೋ ಏನೋ...' ಒಗೆಯುವ ಕಟ್ಟೆಯ ಮೇಲೆ ಕುಳಿತು ಮೊಬೈಲ್ ಅನ್ನೆ ನಿಟ್ಟಿಸುತ್ತಿದ್ದವಳು ಅಪ್ಪನ ಮಾತಿಗೆ ಗಮನ ಕೊಟ್ಟಾಗ ತನ್ನ ಸುತ್ತಲೂ ಕತ್ತಲಾವರಿಸಿದ್ದು ಅರಿವಿಗೆ ಬಂತು. ಮಳೆಯೊಡನೆ ಹೊರಟ ಗಾಳಿ ತಣುವಾಗಿ ಬಿಸಿಲಿನ ಅರೆಝಳಕ್ಕ ಹಾಯನಿಸಿತು.

ಒಮ್ಮಿಂದೊಮ್ಮೆಲೆ ಹಾಡು ಬಂತು 'ಚಲತೆ... ಚಲತೆ... ಮೇರೆ ಏ ಗೀತ ಯಾದ ರಖನಾ...' ಹಸಿರು ಬಣ್ಣದ ಮೇಲೆ ಬೆರಳಿಟ್ಟು ಕೆಂಪಿನತ್ತ ತೀಡಿದಳು. ಮೆಲುವಾಗಿ ಹಲೋ ಎಂದಳಷ್ಟೆ... ಆ ಕಡೆಯಿಂದ ಅವಸರದಲ್ಲಿ ಮಾತಾಡುತ್ತಿದ್ದರು. ಭರ್ರೋ ಗಾಳಿ ಬೀಸುವ ಸದ್ದಿನಲ್ಲಿ ಯಾರು ಮಾತಾಡುತ್ತಿದ್ದಾರೆಂಬುದು ಕೇಳದಾಯ್ತು.

'ಹಲೋ... ಹಲೋ...'

ಇವಳ ಮಾತು ಕೇಳಿಸಿಕೊಳ್ಳುವ ಸಮಾಧಾನವಿದ್ದಿರಲಿಲ್ಲ. ಅವರು ಏನನ್ನೋ ಬಡಬಡಿಸಿದಂತೆ... ಬರ್ಚಿ... ದಾಂಡೇಲಿ ನಾಕಾ... ರೇಂಜರ್... ಆಕ್ಸಿಡೆಂಟ್ ಇಂತವೇ ನಾಲ್ಕಾರು ಶಬ್ದಗಳ ಹೊರತಾಗಿ ಯಾವುದೂ ಕೇಳಲಿಲ್ಲ. ಫೋನ್ ಕಟ್ ಮಾಡಿ ಮತ್ತೆ ಪ್ರಯತ್ನಿಸಿದಳು... ನೀವು ಕರೆ ಮಾಡಿರುವ ಚಂದಾದಾರರು ಬಿಜಿಯಾಗಿದ್ದಾರೆ ಎಂದಷ್ಟೇ ಕೇಳಿಸುತ್ತಿತ್ತು. ಅಪ್ಪನ ಮೊಬೈಲಿಗೆ ಸುದ್ದಿ ಬಂದಾಗ ಅಲ್ಲೇಲ್ಲೋ ಗುಡುಗುತ್ತಲಿದ್ದ ಸಿಡ್ಲು ಇಲ್ಲೇ ಇವರ ಮನೆಯ ಮೇಲೆ ಹೊಡೆಯಿತೊಂದು ಗುಡುಗನ್ನ... ಅಳಿಯನಿಗೆ ಆಕ್ಸಿಡೆಂಟ್ ಆಗಿದೆ ಎಂಬುದರಿಂದ ಶುರುವಾಗಿ ತಾಯಿ ತಂದೆ ಇಬ್ಬರು ಅವಸರವಾಗಿ ಹಳಿಯಾಳಕ್ಕೆ ಹೋಗುವ ತಯಾರಿ ಮಾಡಿಕೊಂಡರು.

ಕ್ಷಮೆ ಕೇಳುವ ಮಾತು ನುಂಗಿಕೊಂಡು ಶಾರದೆ ದಿಗ್ಭ್ರಾಂತಳಾಗಿ ಕುಳಿತಳು.

★★★

ದಿನಕಳೆದು ವಾರೊಪ್ಪತ್ತು ಆದರೂ ಅಟ್ಟ, ಮನೆಯ ಮೂಲೆ, ವಾರಪಡಸಾಲೆ, ಹುಸಿಕಟ್ಟೆ, ಅಡುಗೆ ಮನೆ, ದೇವರ ಖೋಲಿ, ಹಿತ್ತಲು, ಬಾವಿ, ನೀರಿಲ್ಲದೆ ಸೊರಗುತ್ತಿದ್ದ ಗಿಡಬಳ್ಳಿ, ಹೂವುಗಳು ಇನ್ನಷ್ಟು ಶೂನ್ಯವನ್ನು ತುಂಬಿಕೊಳ್ಳತೊಡಗಿದವು. ಆಕ್ಸಿಡೆಂಟ್ ಕಾರಣಕ್ಕೆ ಕೊಟ್ಟ ಮಾತು ತಪ್ಪುವುದು ಮತ್ತು ಆಪತ್ಕಾಲದಲ್ಲಿ ಆ ಹುಡುಗನನ್ನು ಬಿಟ್ಟು ಬೇರೆ ವರನನ್ನು ಹುಡುಕುವುದು ಅಷ್ಟು ಸಮಂಜಸವಾದುದಲ್ಲ... ಆದರೆ ಅವನ ಕೈಗಳು ಮತ್ತೆ ಶಕ್ತಿ ತುಂಬಿಕೊಳ್ಳಲಾಗದಷ್ಟು ಬಲಹೀನಗೊಂಡಿದ್ದವು. ಬರ್ಚಿ ಊರಿಂದ ಸ್ವಲ್ಪ ಮುಂದಕ್ಕೆ ಹೋಗುವಷ್ಟರಲ್ಲಿ ಒಂದು ಸಣ್ಣ ತೊರೆ ಬರುತ್ತದೆ. ಅಲ್ಲೊಂದು ಸಣ್ಣ ಸೇತುವೆಯೂ ಇದೆ. ಅಲ್ಲಿಂದ ಹಾರಿ ಹಳ್ಳದ ಮಡುವಿನಲ್ಲಿದ್ದ ಕಲ್ಲುಗಳ ಮೇಲೆ ಕೈಯೂರಿ ಬಿದ್ದ ಪೆಟ್ಟು ಆಜೀವ ಅವನ ನೆಂಟನಾಗುವಂತೆ ಮಾಡಿತ್ತು. ಹೆಲ್ಮೆಟ್ ಇದ್ದುದಕ್ಕೆ ತಲೆಗೆ ಅಂಥ ಭಾರಿ ಪೆಟ್ಟಾಗಿರಲಿಲ್ಲವಾದರೂ, ಉಣ್ಣುವುದು, ತಿನ್ನುವುದಿರಲಿ ಸಂಡಾಸು ತೊಳೆದುಕೊಳ್ಳುವಷ್ಟು ತ್ರಾಣವೂ ಅವನ ಕೈಗಳಲ್ಲಿರಲಿಲ್ಲ.

ವಾರಗಟ್ಟಲೆ ದವಾಖಾನೆಯ ಗುಳಿಗಿ, ಎಣ್ಣೆ, ಫಿನಾಯಿಲ್ ವಾಸನೆ ಕುಡಿದು ಜ್ವರ ಬಂದಂತಿದ್ದ ಅವಳಪ್ಪನ ಎದುರು ಊರೇ ದಂಡಾಗಿ ಸೇರಿತ್ತು. ಎಂಟಾನೆಂಟು ದಿನ ಮಂಜುನಾಥ ಆಸ್ಪತ್ರೆಯ ಮುಂಬಾಗಿಲಲ್ಲಿ, ಆ ಮೆಟ್ಟಿಲುಗಳ ಮೇಲೆ, ವಾರ್ಡುಗಳ